ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Wednesday, the 9th May, 1979/Vaishaka 19, 1901 S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS

(To which Oral Answers were given)

Non-payment of Salary to the staff of Taluk Development Boards in S. K. Dist.

12. SRI K. RAMBHAT (Puttur).—Will the Minister for Rural Development and Panchayati Raj be pleased to state :—

(a) whether it is a fact that the expenditure of Health Centres run by the T. D. Bs. though taken over by Government, is still being met by the T.D.Bs ;

(b) whether it is a fact that the salary for the month of July 1978 has not been paid so far to the staff of the Health centres in South Kanara District if so, the reasons for the same ;

(c) whether it has come to the notice of the Government that due to paucity of funds, salary for the month of August 1978 has not been paid to the employees of the Taluk Development Board, South Kanara District ?

SRI K. PRABHAKAR.(Minister for Rural Development and Panchayati Raj).—

(a) The Government has not yet taken over the Health Centres which are run by the Taluk Development Boards.

b) · No.

(c) Except the Taluk Development Board, Belthangadi the remaining T.D.Bs. have paid the salaries for month of August.

ಶ್ರೀ ಕೆ ರಾಮಭಟ್.—ಸ್ವಾಮಿ, ತಾಲೂಕು ಅಭಿವೃದ್ಧಿ ಮಂಡಲಿಗಳ ಅಧೀನದಲ್ಲಿನ ಆರೋಗ್ಯ ಕೇಂದ್ರಗಳನ್ನು ಸರ್ಕಾರವು ಇನ್ನೂ ವಹಿಸಿಕೊಂಡಿಲ್ಲ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ವಹಿಸಿಕೊಳ್ಳುತ್ತೇವೆ ಎನ್ನುವ ಸೂಚನೆಯನ್ನೇನಾದರೂ ಕೊಟ್ಟಿದ್ದೀರಾ ?

† ಶ್ರೀ ಕೆ. ಪ್ರಭಾಕರ್. —ಕೊಟ್ಟಿದ್ದೇವೆ.

ಶ್ರೀ ಕೆ. ರಾಮಭಟ್.—ಸ್ವಾಮಿ, ೧೯೭೮ರ ಆಗಸ್ಟ್ ತಿಂಗಳಿನಲ್ಲಿ ಬೆಳ್ತಂಗಡಿಗೆ ಮಾತ್ರ ಕೊಟ್ಟಿಲ್ಲ, ಬೇರೆ ಕಡೆ ಕೊಟ್ಟಿದ್ದೇವೆಂದು ಹೇಳಿದ್ದೀರಾ. ಅದು ಆದನಂತರ ಸಂಬಳ ಕೊಡದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪ್ರಭಾಕರ್.—ಈಗ ಅವರಿಗೆ ಸಂಬಳ ಕೊಡಲಾಗಿದೆ. ಈಗ ಲೇಟೆಸ್ಟ್ ಪೊಸಿಷನ್ ತಾವು ಯಾವ ತಿಂಗಳಿಗೆ ಕೊಟ್ಟಿಲ್ಲ ಎಂದು ಹೇಳಿದ್ದೀರಿ, ಆ ಸಂಬಳ ಅವರಿಗೆ ಕೊಡಲಾಗಿದೆ.

ಶ್ರೀ ಕೆ. ರಾಮಭಟ್.—ಅಧ್ಯಕ್ಷರೇ, ನಾನು ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಕಾಲ್ ಅಟೆನ್ಷನ್ ನೋಟೀಸ್ ಕೊಟ್ಟಿದ್ದೆ. ಈ ತಾಲ್ಲೂಕು ಬೋರ್ಡ್ ಮಂಡಲಿಗಳಿಗೆ ಅಡ್‌ಹಾಕ್ ಗ್ರಾಂಟ್ಸ್ ಕೊಡುತ್ತೇವೆಂದು ಪೂರ್ಣ ಮುಖ್ಯ ಮಂತ್ರಿಗಳು ಎಲ್ಲಾ ಶಾಸಕರುಗಳಿಗೂ ಮಾತು ಕೊಟ್ಟಿದ್ದರು. ಇವೊತ್ತು ಆರ್ಥಿಕ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಸರ್ಕಾರದ ಕಡೆಯಿಂದ ಇದಕ್ಕೆ ಈಗಲೇ ಉತ್ತರ ಹೇಳಿದರೆ ನಾನು ಕಾಲ್ ಅಟೆನ್‌ಷನ್ ನೋಟೀಸ್ ಬಗ್ಗೆ ಕೇಳಲಿಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.—ಅದನ್ನೆಲ್ಲಾ ಪರಿಶೀಲನೆ ಮಾಡಿ ಗಮನ ಸೆಳೆಯುವ ಸೂಚನೆಗೆ ಬದಲಾವಣೆ ಮಾಡಿ ಅದಕ್ಕೆ ಪ್ರಶ್ನೆಯ ರೂಪದಲ್ಲಿ ಮಾಹಿತಿ ತರಿಸಿದ್ದೇವೆ. ಅದನ್ನು ತಾವು ಪ್ರಶ್ನೆಯ ರೂಪದಲ್ಲಿ ಈಗ ಕೇಳಬಹುದು.

ಶ್ರೀ ಕೆ. ರಾಮಭಟ್.—ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಶಾಸಕರು ವಿತ್ತೀಯ ಸಚಿವರನ್ನು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ತಾತ್ಕಾಲಿಕ ಗ್ರಾಂಟ್ಸ್ ಕೊಡಬೇಕೆಂದು ಕೇಳಿದ್ದಕ್ಕೆ ಅವರು ಒಪ್ಪಿಕೊಂಡಿದ್ದರು. ಆದುದರಿಂದ ಇದರ ಬಗ್ಗೆ ಸರ್ಕಾರದ ಕಡೆಯಿಂದ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಇದು ಗುರುತರವಾದ ಪ್ರಶ್ನೆ. ಈ ಪ್ರಶ್ನೆಯಲ್ಲಿ ಅದು ಉದ್ಭವವಾಗುವುದಿಲ್ಲ. ಆದರೂ ಕೂಡ. ಈ ತರಹ ಹಣದ ನೆರವನ್ನು ಸಂಸ್ಥೆಗಳಿಗೆ ಕೊಡಬೇಕೆಂದು ಸರ್ಕಾರದ ಪರಿಶೀಲನೆಯಲ್ಲಿದೆ. ಅದರಲ್ಲಿ ಬೆಳ್ತಂಗಡಿಯೂ ಕೂಡ ಸೇರಿದೆ.

ಶ್ರೀ ಕೆ. ರಾಮಭಟ್.—ಅಧ್ಯಕ್ಷರೇ, ಬೆಳ್ತಂಗಡಿಗೆ ಕೊಡತಕ್ಕದ್ದು ಪರಿಶೀಲನೆಯಲ್ಲಿರುವುದು ಮುಖ್ಯವಲ್ಲ. ಎಲ್ಲಾ ತಾಲ್ಲೂಕು ಬೋರ್ಡ್‌ಗಳಿಗೂ ಕೊಡಬೇಕಾಗುತ್ತದೆ. ಈಗ ಹೆಲ್ತ್ ಗ್ರಾಂಟ್ ಎಷ್ಟೋಲ್ಡ್ ಮಾಡಿದ್ದಾರೆ. ಅದನ್ನು ಕೂಡಲೇ ರಿಲೀಸ್ ಮಾಡಿಸುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಬೆಳ್ತಂಗಡಿಗೆ ಸಂಬಂಧಪಟ್ಟ ಬಗ್ಗೆ ಹೆಲ್ತ್ ಗ್ರಾಂಟ್ಸ್ ಬರಬೇಕು ಎನ್ನುವುದು ತಮ್ಮ ಕಂಟೆನ್‌ಷನ್‌ನಲ್ಲಿ ಏನಿದೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ರಾಮಭಟ್.—ಸ್ವಾಮಿ, ಅಲ್ಲಿ ಬಹಳ ಶೋಚನೀಯವಾದ ಪರಿಸ್ಥಿತಿ ಇದೆ. ಪರಿಶೀಲನೆಯಲ್ಲಿದೆ ಎಂದು ವರ್ಷಾನುಗಟ್ಟಲೆ ಮಾಡಿದರೆ ಹೇಗೆ ?

ಅಧ್ಯಕ್ಷರು.—ಮೈನ್‌ಟೆನೆನ್ಸ್ ಆಫ್ ತಾಲ್ಲೂಕು ಬೋರ್ಡ್ ಹಾಸ್ಪಿಟಲ್ಸ್‌ಗೆ ೫೦ ಪರ್‌ಸೆಂಟ್ ಸರಿಯಾದ ರೂಪದಲ್ಲಿ ಭರ್ತಿ ಮಾಡಿಕೊಡುವ ಹಾಗೆ ಹೆಲ್ತ್ ಡಿಪಾರ್ಟ್‌ಮೆಂಟಿನವರು. ಇವರು ಕೊಡುವುದಿಲ್ಲ.

ಶ್ರೀ ಕೆ. ರಾಮಭಟ್.—ಅಧ್ಯಕ್ಷರೆ, ಮಂತ್ರಿಮಂಡಲಕ್ಕೆ ಯಾವುದೇ ಆದರೂ ಜವಾಬ್ದಾರಿ ಇಲ್ಲವೇ ಇವರು ಆರೋಗ್ಯ ಮಂತ್ರಿಗಳವರ ಹತ್ತಿರ ಒತ್ತಾಯ ಮಾಡಿ ತೆಗೆಸಿಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ನಿಮ್ಮ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರನ್ನು ಅವರ ಕಡೆಗೆ ಕಳುಹಿಸಿ ಒತ್ತಾಯ ಮಾಡಲಿಕ್ಕೆ ಹೇಳಿ.

---

† indicates that the remarks or speeches have not been revised by the member concerned.